**ವಿಶೇಷ ಸೂಚನೆ :**

1) ಟೆಂಡರ್‌ನಲ್ಲಿ ಪ್ರಕಟಿಸಿದ ಮಾದರಿಯ/ಸಾಮರ್ಥ್ಯದ ಕನಿಷ್ಠ 04 ವಾಹನವುಳ್ಳವರು ಮಾತ್ರ ಟೆಂಡರ್ ಅರ್ಜಿ ಜೊತೆಯಲ್ಲಿ ವಾಹನವಾರು ದಾಖಲಾತಿಗಳನ್ನು ಲಗತ್ತಿಸಿರಬೇಕು.

2) ಟೆಂಡರ್‌ನಲ್ಲಿ ಸೂಚಿಸಿರುವ ಮಾರ್ಗ ಸಂಖ್ಯೆ 1ರ ಮಾರ್ಗಕ್ಕೆ ಪಶುಆಹಾರವನ್ನು ಸಾಗಾಣಿಕೆ ಮಾಡಲು ಸುಸ್ಥಿತಿಯಲ್ಲಿರುವ ಸರಕು ಸಾಗಿಸುವ ಗರಿಷ್ಠ 28ಮೆ.ಟನ್ ಲಾಡನ್ ಸಾಮರ್ಥ್ಯವುಳ್ಳ 2010 ರ ಅಥವಾ ನಂತರದ ಮಾದರಿಯ ಟಾರ್ಪಲ್ ಮುಚ್ಚಿದ ಬಾಡಿಯುಳ್ಳ ವಾಹನಗಳು ಇರಬೇಕು. ಟಾರ್ಪಲ್ ಮುಚ್ಚಳಿಕೆಗೆ ಅನುವಾಗುವಂತಿರಬೇಕು.

3) ಗುತ್ತಿಗೆ ವರ್ಗಾವಣೆಗೆ ಅವಕಾಶವಿರುವುದಿಲ್ಲ. ಆದರೂ ಸಹ ಅನಿವಾರ್ಯ ಸಂದರ್ಭದಲ್ಲಿ ಆದೇಶ ಪಡೆದು ವಾಹನ ಓಡಿಸಿದ ಕನಿಷ್ಟ 03 ತಿಂಗಳ ನಂತರ ನಿಯಾಮಾನುಸಾರ ವರ್ಗಾವಣೆ ಶುಲ್ಕ ರೂ.10,000/– ಪಾವತಿಸಿದಲ್ಲಿ ಮಾತ್ರ ಮಾಡಲಾಗುವುದು.

4) ಪ್ರಸ್ತುತ ಒಕ್ಕೂಟದಲ್ಲಿ ಪಶುಆಹಾರ ಸಾಗಾಣಿಕೆಯಲ್ಲಿ ಚಾಲ್ತಿಯಲ್ಲಿರುವ ಗುತ್ತಿಗೆದಾರರು ಸಹ ಇನ್ನೂ ಟೆಂಡರ್ ಅವಧಿ ಮುಗಿಯದೇ ಇರುವ ಕಾರಣ ಸದರಿ ಪಶುಆಹಾರ ಸಾಗಾಣಿಕೆ ಮಾರ್ಗಗಳಿಗೆ ನೀಡಿರುವ ವಾಹನ ದಾಖಲಾತಿಗಳನ್ನು ಈ ಟೆಂಡರಿಗೆ ಸಲ್ಲಿಸಬಹುದಾಗಿದೆ.

5) ಶಿವಮೊಗ್ಗ ಹಾಲು ಒಕ್ಕೂಟಕ್ಕೆ ಕಹಾಮದಿಂದ ಕಾಲಕಾಲಕ್ಕೆ ಪಶುಆಹಾರ ಪರಿಮಾಣವನ್ನು ಹಂಚಿಕೆ ಮಾಡುವ ಅಥವಾ ಪಶುಆಹಾರ ಕಾರ್ಖಾನೆಯಲ್ಲಿ ಉತ್ಪಾದನೆಯಾಗುವ ಪರಿಮಾಣದಲ್ಲಿ ವ್ಯತ್ಯಾಸವಾಗಬಹುದು. ಪ್ರಸ್ತುತ ಟೆಂಡರ್ ಕರೆಯಾಗಿರುವ ಮಾರ್ಗಕ್ಕೆ ನಿಗದಿಪಡಿಸಿರುವ ಪಶುಆಹಾರ ಪರಿಮಾಣ ನಿರ್ದಿಷ್ಟವಾಗಿರುದಿಲ್ಲ. ಒಕ್ಕೂಟದ ಬೇಡಿಕೆ ತಕ್ಕಂತೆ ಅವಶ್ಯಕತೆಗನುಗುಣವಾಗಿ ಪಶುಆಹಾರ ಎತ್ತುವಳಿ ಮಾಡಬೇಕಿರುತ್ತದೆ. ಆದ್ದರಿಂದ ಮಾಸಿಕ ಪಶುಆಹಾರ ಸಾಗಾಣಿಕಾ ಪರಿಮಾಣವು ಸಹ ವ್ಯತ್ಯಾಸವಾಗುವುದು. ಇದಕ್ಕೆ ಬದ್ಧರಾದ ಸಾಗಾಣಿಕೆ ಗುತ್ತಿಗೆದಾರರು ಮಾತ್ರ ಟೆಂಡರ್ ಅರ್ಜಿ ಸಲ್ಲಿಸಬಹುದು.

6) <u>ಧಾರವಾಡ /ಗುಬ್ಬಿ ಪಶುಅಹಾರ ಘಟಕದಿಂದ ಪಶುಆಹಾರ ಸರಬರಾಜು ಮಾಡಲು ಕರೆದಿರುವ ಟೆಂಡರ್ ತಾತ್ಕಾಲಿಕವಾಗಿದ್ದು, ಕಹಾಮದ ಧಾರವಾಡ /ಗುಬ್ಬಿ ಪಶುಆಹಾರ ಮಿಶ್ರಣ ಕಾರ್ಖಾನೆಯಿಂದ ಶಿವಮೊಗ್ಗ ಹಾಲು ಒಕ್ಕೂಟಕ್ಕೆ ಹಂಚಿಕೆಯಾಗಿರುವ ಪಶುಆಹಾರವು ಸ್ಥಗಿತಗೊಂಡಲ್ಲಿ ಟೆಂಡರನ್ನು ಸ್ಥಗಿತಗೊಳಿಸಲಾಗುವುದು. ಈ ಷರತ್ತಿಗೆ ಬದ್ಧರಾದ ವಾಹನ ಮಾಲೀಕರು/ಟೆಂಡರ್‌ದಾರರು ಟೆಂಡರ್ ಅರ್ಜಿ ಸಲ್ಲಿಸಬಹುದಾಗಿದೆ.</u>

7) <u>ಒಕ್ಕೂಟದ ಬೇಡಿಕೆ/ಅಗತ್ಯತೆಗೆ ಅನುಗುಣವಾಗಿ ಕಹಾಮದ ಧಾರವಾಡ/ಗುಬ್ಬಿ ಪಶುಆಹಾರ ಕಾರ್ಖಾನೆಯಿಂದ ಪಶುಆಹಾರವನ್ನು ಎತ್ತುವಳಿ ಮಾಡಿ ಸಾಗಾಣಿಕೆ ಮಾಡಬೇಕಾಗಿರುತ್ತದೆ. ಟೆಂಡರ್‌ನಲ್ಲಿ ನಿಗದಿಪಡಿಸಲಾದ ಪರಿಮಾಣ ಸ್ಥಿರವಾಗಿರುವುದಿಲ್ಲ. ಈ ಷರತ್ತಿಗೆ ಬದ್ಧರಾದ ವಾಹನ ಮಾಲೀಕರು/ಟೆಂಡರ್‌ದಾರರು ಟೆಂಡರ್ ಅರ್ಜಿ ಸಲ್ಲಿಸಬಹುದಾಗಿದೆ.</u>

8) ಕ್ರ.ಸಂ. 01ರ ಪಶುಆಹಾರ ಸಾಗಾಣಿಕೆ ಮಾರ್ಗಕ್ಕೆ ಎರಡು ವರ್ಷಗಳ ಅವಧಿಗೆ ವಾಹನ ಒದಗಿಸಲು ಟೆಂಡರ್ ಕರೆಯಲಾಗಿದೆ.

ಈ ಮೇಲೆ ತಿಳಿಸಿರುವಂತೆ ಟೆಂಡರ್ ಒಪ್ಪಿಗೆಯಾದಲ್ಲಿ ಆಯಾ ಮಾರ್ಗದ ಮುಂದೆ ಸೂಚಿಸಿದ ಭದ್ರತಾ ಠೇವಣಿ ನೀಡಲು ಒಪ್ಪಿರುತ್ತೇನೆ.

ಟೆಂಡರ್‌ದಾರರ ಸಹಿ ಮತ್ತು ಹೆಸರು
(ದಪ್ಪ ಅಕ್ಷರಗಳಲ್ಲಿ)

# ಘೋಷಣಾ ಪತ್ರ

ದಿನಾಂಕ :

**ವ್ಯವಸ್ಥಾಪಕ ನಿರ್ದೇಶಕರು**
**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ**
**ಜಿಲ್ಲಾ ಸಹಕಾರ ಹಾಲು ಒಕ್ಕೂಟ**
**ಮಾಚೇನಹಳ್ಳಿ ನಿದಿಗೆ ಅಂಚೆ**
**ಶಿವಮೊಗ್ಗ.**

ಮಾನ್ಯರೇ,

ವಿಷಯ : ಟೆಂಡರ್‌ನಲ್ಲಿ ಬಿಡ್ ಮಾಡುವ ಬಗ್ಗೆ.

ಉಲ್ಲೇಖ : ಐ.ಎಫ್.ಟಿ/ಸಂಖ್ಯೆ/ಶಿದಾಚಿಸಹಾಒ/ಶೇಮತಾಂ/ಪ.ಆ/5024 /2023-24
**ದಿನಾಂಕ: 12.09.2023**

****

ಮೇಲಿನ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಕಹಾಮ ಗುಬ್ಬಿ ಪಶುಆಹಾರ ಘಟಕ ಅಥವಾ ಕಹಾಮ ಧಾರವಾಡ ಪಶುಆಹಾರ ಕಾರ್ಖಾನೆಯಿಂದ ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ವ್ಯಾಪ್ತಿಯ ಹಾ.ಉ.ಸ.ಸಂಘಗಳಿಗೆ ಪಶುಆಹಾರ ಸಾಗಣಿಕೆ ಮಾಡಲು ದ್ವೈವಾರ್ಷಿಕ ಗುತ್ತಿಗೆಗೆ ಸಂಬಂಧಿಸಿದ ಬಿಡ್ ನಿಯಮಾವಳಿಗಳ ಮಾಹಿತಿಗಳನ್ನು ತಿಳಿದು ಹಾಗೂ ಅನುಬಂಧ **'ಎ''ಬಿ' 'ಸಿ' ಮತ್ತು 'ಡಿ'** ನಲ್ಲಿರುವ ಷರತ್ತು ಮತ್ತು ನಿಬಂಧನೆಗಳನ್ನು ಓದಿ, ಅರ್ಥ ಮಾಡಿಕೊಂಡಿದ್ದು ಒಪ್ಪಿ ಟೆಂಡರ್‌ನಲ್ಲಿ ಭಾಗವಹಿಸುತ್ತಿದ್ದೇನೆ. ಟೆಂಡರ್‌ಗೆ ಮೂಲತಃ ಅವಶ್ಯಕತೆ ಇರುವ ಇ.ಎಂ.ಡಿ. (ಬಿಡ್ಡು ಠೇವಣಿ) ಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ನಿಯಮಾವಳಿಯಂತೆ ಸಲ್ಲಿಸಿದೆ. ಪಶುಆಹಾರ ಸಾಗಾಣಿಕೆ ಟೆಂಡರ್‌ಗೆ ಸಂಬಂಧಿಸಿದಂತೆ ಹಾಗೂ ಟೆಂಡರ್‌ನಲ್ಲಿ ಪ್ರಕಟಿಸಿದಂತೆ ಕನಿಷ್ಠ ಸುಸ್ಥಿತಿಯುಳ್ಳ 04 ಸರಕು ಸಾಗಾಣಿಕೆ ವಾಹನಗಳ ದಾಖಲಾತಿ ಪ್ರತಿಗಳನ್ನು ಸಹ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಅಪ್‌ಲೋಡ್ ಮಾಡಿರುತ್ತೇನೆ.

ಇ.ಎಂ.ಡಿ. ಮೊತ್ತ ರೂ. ......................................... (ರೂಪಾಯಿ .......................................ಗಳು ಮಾತ್ರ) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಅಪ್‌ಲೋಡ್ ಮಾಡಿರುತ್ತೆನೆ.

ವಂದನೆಗಳೊಂದಿಗೆ,

ಟೆಂಡರ್ ಅರ್ಜಿ ಸಲ್ಲಿಸಿದ
ಮಾರ್ಗದ ಹೆಸರು :

ಟೆಂಡರ್‌ದಾರರ ಸಹಿ,

ವಿಳಾಸ

